**ಹಿರಿಯ ದಿವಾಣಿ ನ್ಯಾಯಾಧೀಶರು** ಹಾಗೂ **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
ಕಲಘಟಗಿ

## ಸಿ. ಸಿ. ನಂ. **223/2024**

**ಫಿರ್ಯಾದುದಾರ** : **ಸರ್ಕಾರದ ಪರವಾಗಿಃ** ಕಲಘಟಗಿ **ಪೋಲೀಸ ಠಾಣೆ**

**ವಿರುದ್ಧ**

**ಆರೋಪಿತರು** :
1. ಈಶ್ವರಗೌಡ ಈರನಗೌಡ ಪಾಟೀಲ
2. ನಾಗರಾಜ ಈಶ್ವರ ಪಾಟೀಲ
3. ವಿನಾಯಕ ಶಿವಪ್ಪ ಚಿಂಚಲಿ
4. ನಾಗರಾಜ ಶಿವಪ್ಪ ಚಿಂಚಲಿ
5. ಶಿವಮೂರ್ತೆಪ್ಪ ವೀರಭದ್ರಪ್ಪ ಸಂಗೆದೇವರಕೊಪ್ಪ
6. ಬಸಯ್ಯ ಪರವಯ್ಯ ಸಂಗೆದೇವರಕೊಪ್ಪ
7. ಬಸವರಾಜ ಬಸಯ್ಯ ಸಂಗೆದೇವರಕೊಪ್ಪ
8. ಬಸವರಾಜ ಕಲ್ಲಯ್ಯ ಕೊಟಬಾಗಿ
9. ಶಿವಪ್ಪ ಬಸಯ್ಯ ಸಂಗೆದೇವರಕೊಪ್ಪ

### ದೋಷಾರೋಪಣೆ

**ನಾನು,** ಆರ್. ಎಲ್. ಹೋನೊಲೆ, **ಬಿ.ಎ. ಎಲ್.ಎಲ್.ಬಿ.,** (ಸ್ಪೇಷಲ್) **ಹಿರಿಯ ದಿವಾಣಿ ನ್ಯಾಯಾಧೀಶರು** ಹಾಗೂ **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ** ಗಳು, ಕಲಘಟಗಿ **ಆದ ನಾನು ಆರೋಪಿತರಾದ ನಿಮ್ಮ ಮೇಲೆ** ಹೊರಿಸುವ **ಆರೋಪ** ಎನೆಂದರೆ,

ಕಲಘಟಗಿ **ಪೋಲೀಸ ಠಾಣೆ ಹದ್ದಿ ಪೈಕಿ ದಿಃ** 07-03-2023 **ರಂದು** ಸಂಜೆ 06-30 **ಗಂಟೆ** ಸಮಯದಲ್ಲಿ ತುಮರಿಕೊಪ್ಪ ಗ್ರಾಮದ ಚರ್ಚ ಮುಂದಿನ ರಸ್ತೆಯಲ್ಲಿ **ಆರೋಪಿತ**ರಾದ **ನೀ**ವು ದೊಂಬಿ ಮಾಡುವ ಉದ್ದೇಶದಿಂದ ಅಕ್ರಮ ಗುಂಪು ರಚಿಸಿಕೊಂಡು ಬಂದು, **ಭಾರತೀಯ ದಂಡ ಸಂಹಿತೆ ಕಲಂ** 143, 147,148 **ಸಹವಾಚಕ ಕಲಂ** 149 **ರಡಿಯಲ್ಲಿ ಅಪರಾಧ** ಮಾಡಿರುವುದಾಗಿ **ದೋಷಾರೋಪಣೆ** ಮಾಡಲಾಗಿದೆ.

ಮೇಲೆ ಹೇಳಿದ ದಿನಾಂಕ, **ಸಮಯ** ಹಾಗೂ **ಸ್ಥ**ಳದ**ಲ್ಲಿ** ಸಾಕ್ಷಿ **೪** ನೇ ದವರಿಗೆ ಆರೋಪಿತರಾದ ನೀವು ಅವಾಚ್ಯ ಶಬ್ದಗಳಿಂದ ಬೈದಾಡಿ **ಭಾರತೀಯ ದಂಡ ಸಂಹಿತೆ ಕಲಂ** 504 **ಸಹಕಲಂ** 149 **ರಡಿಯಲ್ಲಿ ಅಪರಾಧ** ಮಾಡಿರುವುದಾಗಿ **ದೋಷಾರೋಪಣೆ** ಮಾಡಲಾಗಿದೆ.

ಮೇಲೆ ಹೇಳಿದ ದಿನಾಂಕ, **ಸಮಯ** ಹಾಗೂ **ಸ್ಥ**ಳದ**ಲ್ಲಿ** 1 ಮತ್ತು 2 ನೇ ಆರೋಪಿತರಾದ ನೀವು ಸಾಕ್ಷಿ- **೮** ನೇದವರಿಗೆ ಕಲ್ಲಿನಿಂದ ಎದೆಗೆ ಹಲ್ಲೆ ಮಾಡಿದ್ದಲ್ಲದೇ, ಜಗಳವನ್ನು ಬಿಡಿಸಿಕೊಳ್ಳಲು ಬಂದಿದ್ದ ಸಾಕ್ಷಿ 5 ನೇದವರಿಗೆ 1 ನೇ ಆರೋಪಿ ಅದೇ ಕಲ್ಲಿನಿಂದ ಎಡ ಗಾಲಿಗೆ ಪೆಟ್ಟಾಗುವಂತೆ 2 ನೇ ಆರೋಪಿ ಸದರಿ ಕಲ್ಲಿನಿಂದ ಸಾಕ್ಷಿ-6 ನೇದವರಿಗೆ ಹಲ್ಲೆ ಮಾಡಿ, ರಕ್ತಗಾಯ ಪಡಿಸಿ, ಜಗಳವನ್ನು ಬಿಡಿಸಿಕೊಳ್ಳಲು ಹೋಗಿದ್ದ ಸಾಕ್ಷಿ-7 ಮತ್ತು 11 ನೇದವರಿಗೆ 5 ನೇ ಆರೋಪಿ ಬಡಿಗೆಯಿಂದ ಒಳಪೆಟ್ಟಾಗುವಂತೆ ಹಲ್ಲೆ ಮಾಡಿ, ಸಾಕ್ಷಿ-9 ನೇದವರಿಗೆ 3 ನೇ ಆರೋಪಿತನಾದ ನೀನು ಬಡಿಗೆ ತೆಗೆದುಕೊಂಡು ಒಳಪೆಟ್ಟಾಗುವಂತೆ ಮಾಡಿ, ಸಾಕ್ಷಿ-10 ನೇದವರಿಗೆ 4 ನೇ ಅರೋಪಿತನಾದ ನೀನು ಬಡಿಗೆಯಿಂದ ಹಲ್ಲೆ ಮಾಡಿ, ಸಾಕ್ಷಿ-12 ನೇದವರಿಗೆ 6 ಮತ್ತು 7 ನೇ ಆರೋಪಿತರಾದ ನೀವು ಬಡಿಗೆಯಿಂದ ಹಲ್ಲೆ ಮಾಡಿ, ಸಾಕ್ಷಿ-13 ನೇದವರಿಗೆ 8 ಮತ್ತು 9 ನೇ ಆರೋಪಿತರಾದ ನೀವು ಬಡಿಗೆಯಿಂದ ಹಲ್ಲೆ ಮಾಡಿ, ಜಗಳವನ್ನು ಬಿಡಿಸಿಕೊಳ್ಳಲು ಬಂದಿದ್ದ ಸಾಕ್ಷಿ-1 ನೇದವರಿಗೆ 1 ಮತ್ತು 2 ನೇ ಆರೋಪಿತರಾದ ನೀವು ಕೈಕಾಲುಗಳಿಂದ ಹಲ್ಲೆ ಮಾಡಿ **ಭಾರತೀಯ ದಂಡ ಸಂಹಿತೆ ಕಲಂ** 323, 324 **ಸಹಕಲಂ** 149 **ರಡಿಯಲ್ಲಿ ಅಪರಾಧ** ಮಾಡಿರುವುದಾಗಿ **ದೋಷಾರೋಪಣೆ** ಮಾಡಲಾಗಿದೆ.

ಮೇಲೆ ಹೇಳಿದ ದಿನಾಂಕ, **ಸಮಯ** ಹಾಗೂ **ಸ್ಥಳ**ದಲ್ಲಿ ೧ ಮತ್ತು ೨ನೇ ಆರೋಪಿತರಾದ ನೀವು ಜಗಳವನ್ನು ಬಿಡಿಸಿಕೊಳ್ಳಲು ಬಂದಿದ್ದ ಸಾಕ್ಷಿ-೧ನೇದವರಿಗೆ ಮೈಮೇಲಿನ ಸೀರೆಯನ್ನು ಹಿಡಿದು ಎಳೆದಾಡಿ ಸಾರ್ವಜನಿಕವಾಗಿ ಅಪಮಾನ ಮಾಡಿ **ಭಾರತೀಯ ದಂಡ ಸಂಹಿತೆ ಕಲಂ 354 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧ ಮಾಡಿರುವುದಾಗಿ ದೋಷಾರೋಪಣೆ** ಮಾಡಲಾಗಿದೆ.

ಮೇಲೆ ಹೇಳಿದ ದಿನಾಂಕ, **ಸಮಯ** ಹಾಗೂ **ಸ್ಥಳ**ದಲ್ಲಿ ಆರೋಪಿತರಾದ ನೀವು ಜೀವದ ಬೆದರಿಕೆ ಹಾಕಿ **ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧ ಮಾಡಿರುವುದಾಗಿ ದೋಷಾರೋಪಣೆ** ಮಾಡಲಾಗಿದೆ.

ಕಲಘಟಗಿ
**ದಿನಾಂಕ**ಃ **-12-2025**

(ಆರ್.ಎಲ್.ಹೋನೊಲೆ)
**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**, ಕಲಘಟಗಿ

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ

**ಸಿ.ಸಿ.ನಂಃ223ಃ2024**

ಫಿರ್ಯಾದುದಾರ : ಸರ್ಕಾರದ ಪರವಾಗಿಃ ಕಲಘಟಗಿ ಪೋಲೀಸ ಠಾಣೆ

ವಿರುದ್ಧ

ಆರೋಪಿತರು :

ಪ್ರಶ್ನೆ 1 : ನೀನು ಮೇಲೆ ಓದಿ ಹೇಳಿದ ಮತ್ತು ವಿವರಿಸಿದ ದೋಷಾರೋಪಣೆಯನ್ನು ಅರ್ಥೈಸಿಕೊಂಡಿರುವೆಯಾ?

ಉತ್ತರ :

ಪ್ರಶ್ನೆ 2 : ಮೇಲೆ ಮಾಡಿದ ಆಪಾದನೆಗಳನ್ನು ಒಪ್ಪಿಕೊಳ್ಳುತ್ತೀಯಾ?

ಉತ್ತರ :

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾದನೆಗಳನ್ನು ಅವನಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾದನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿವೆ)

ಹುಬ್ಬಳ್ಳಿ
ದಿನಾಂಕಃ 20-12-2025

ಹಿರಿಯ ದಿವಾಣಿ ನಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ

**ಸಿ.ಸಿ.ನಂಃ223ಃ2024**

ಫಿರ್ಯಾದುದಾರ : ಸರ್ಕಾರದ ಪರವಾಗಿಃ ಕಲಘಟಗಿ ಪೋಲೀಸ ಠಾಣೆ

ವಿರುದ್ಧ

ಆರೋಪಿತರು :

ಪ್ರಶ್ನೆ 1 : ನೀನು ಮೇಲೆ ಓದಿ ಹೇಳಿದ ಮತ್ತು ವಿವರಿಸಿದ ದೋಷಾರೋಪಣೆಯನ್ನು ಅರ್ಥೈಸಿಕೊಂಡಿರುವೆಯಾ?

ಉತ್ತರ :

ಪ್ರಶ್ನೆ 2 : ಮೇಲೆ ಮಾಡಿದ ಆಪಾದನೆಗಳನ್ನು ಒಪ್ಪಿಕೊಳ್ಳುತ್ತೀಯಾ?

ಉತ್ತರ :

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾದನೆಗಳನ್ನು ಅವನಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾದನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿವೆ)

ಹುಬ್ಬಳ್ಳಿ
ದಿನಾಂಕಃ 20-12-2025

ಹಿರಿಯ ದಿವಾಣಿ ನಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ